A.—Sri ALUR HANUMANTHAPPA (Deputy Minister for Minor Irrigation).—

(*a*) No.
(*b*) No.
(*c*) and (*d*) Do not arise.

ಶ್ರೀ ಜಿ. ಮಾದೇಗೌಡ.—ಶಿಂಷಾ ನದಿಗೆ ಮಟ್ಟದ ದೊಡ್ಡಿಯ ಹತ್ತಿರ ಒಂದು ಅಣೆಕಟ್ಟನ್ನು ಕಟ್ಟಿ ಹಲಗೂರು ಮತ್ತು ವಿರುಪಾಕ್ಷಪುರ ಹೋಬಳಿಗಳಿಗೆ ನೀರು ನರಬರಾಯಿ ಮಾಡಬೇಕೆಂದಿರುವುದು ನಿಜವೇ ಎಂದು ಕೇಳಿರುವುದಕ್ಕೆ ಇಲ್ಲ ಎಂದು ಹೇಳಿದ್ದೀರಿ. ಶಿಂಷಾ ನದಿಯಿಂದ ನೀರು ಒದಗಿಸುವುದಕ್ಕೆ ಮತ್ತೊಂದು ಬೇರೆ ಕಡೆ ಎಸ್ಟಿಮೇಟ್ ಮಾಡಿರತಕ್ಕ ವಿಷಯ ಸರ್ಕಾರದವರ ಗಮನದಲ್ಲಿದೆಯೇ ?

†ಶ್ರೀ ಆಲೂರು ಹನುಮಂತಪ್ಪ.—ಆ ಪ್ರಪೋಸಲ್ ಅಜ್ಜೆಹಳ್ಳಿ ಹತ್ತಿರ ಅಣೆಕಟ್ಟು ಕಟ್ಟುವುಕ್ಕೆ ಸಂಬಂಧಪಟ್ಟದ್ದಾಗಿದೆ. ಮಟ್ಟದ ದೊಡ್ಡಿಗೆ ಎರಡು ಮೈಲಿ ಮೇಲೆ ಅಣೆಕಟ್ಟು ಕಟ್ಟಬೇಕೆಂಬ ಪ್ರಪೋಸಲ್ ಸರ್ಕಾರದಲ್ಲಿದೆ. ಹಿಂದೆ ಸರ್ವೆ ಆಗಿತ್ತು.

ಶ್ರೀ ಜಿ. ಮಾದೇಗೌಡ.—ಈ ಅಜ್ಜೆಹಳ್ಳಿ ಯೋಜನೆ ಕೂಡ ಹಲಗೂರು ಮತ್ತು ವಿರೂಪಾಕ್ಷಪುರ ಈ ಎರಡು ಹೋಬಳಿಗಳಿಗೂ ನೀರು ನರಬರಾಯಿ ಮಾಡತಕ್ಕ ಯೋಜನೆಯಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಹೌದು.

ಶ್ರೀ ಜಿ. ಮಾದೇಗೌಡ.—ಆ ಯೋಜನೆಯನ್ನು ಸರ್ಕಾರದವರು ಎಸ್ಟಿಮೇಟ್ ಮಾಡಿಸಿ ಕೈಬಿಡುವುದಕ್ಕೆ ಕಾರಣವಾದರೂ ಏನು ?

ಶ್ರೀ ಆಲೂರು ಹನುಮಂತಪ್ಪ.—ಸರ್ವೆ ಆಗಿರುವುದು 1944ರಲ್ಲಿ. ಇತ್ತೀಚೆಗೆ ಬೆಂಗಳೂರಿಗೆ ಶಿಂಷಾದಿಂದ ನೀರು ಸರಬರಾಯಿ ಮಾಡಬೇಕೆಂದು ಇಕ್ವೆಸ್ಟಿಗೇಷನ್ ನಡೆಯುತ್ತಾ ಇರುವುದರಿಂದ ಆ ವಿಷಯದಲ್ಲಿ further investigation ಮಾಡಿಲ್ಲ.

ಶ್ರೀ ಎಸ್. ಎಂ. ಕೃಷ್ಣ.—ಈ ಅಜ್ಜೆಹಳ್ಳಿ ಹತ್ತಿರ ಅಣೆಕಟ್ಟು ಕಟ್ಟಿದರೆ ಎಷ್ಟು ಎಕರೆ ನೀರಾವರಿ ಸಾಗುವಳಿಗೆ ಅನುಕೂಲವಾಗುತ್ತದೆ ?

ಶ್ರೀ ಆಲೂರು ಹನುಮಂತಪ್ಪ.—3,000 ಎಕರೆ ನೀರಾವರಿಯಾಗುತ್ತದೆ.

Housing Co-operative Societies for Scheduled Castes and Tribes formed in each District of State.

**Q.*—503. Sri B. BHASKAR SHETTY (Kaup) [On behalf of SRI GOPAL SALENNA] (Mudabidri).—

Will the Government be pleased to state :—

(*a*) the total number of Housing Co-operative Societies for Scheduled Castes and Tribes duly proposed to be formed or registered as per Government instructions to the Co-opeartive Department in each District of Mysore State, in 1961-62, or earlier ;

(*b*) whether they have assured the members of the Housing Co-operative Societies for Scheduled Castes and Tribes to grant loans up to Rs. 3,000 to each of its members at the rate of 2 per cent interest per annum in the year 1961-62 in place of Housing Subsidy Scheme for Scheduled Castes and Tribes ?

A.—Sri RAMAKRISHNA HEGDE (Minister for Co-operation and Development).—

(*a*) (*i*) *Registered during* 1961-62

1	Bellary	...	1
2	Tumkur	...	3
3	Kolar	...	2
4	Mysore	...	7
5	Mandya	...	1
6	Bijapur	...	2
7	Belgaum	...	1
8	Bidar	...	1
9	Gulbarga	...	1
	Total	...	19

(*ii*) *Registered earlier than* 1961-62 *under post-war reconstruction scheme of Bombay State.*

1	Belgaum	...	14
2	Bijapur	...	31
3	Dharwar	...	35
4	Karwar	...	5
	Total	...	85

(*b*) No such assurance is given.

According to the Scheme sanctioned, the member of Co-operative Housing Societies for Scheduled Castes and Tribes can be given free sites and loans ranging from Rs. 1,500 to 3,000. The rate of interest charged is 5 per cent, but only 2 per cent is recovered from the members and the remaining 3 per cent is met by the Social Welfare Department by way of subsidy.

ಶ್ರೀ ಬಿ. ಭಾಸ್ಕರಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸಿಲ್ಲ. ಇದಕ್ಕೆ ಕಾರಣ ವೇನು ?

†ಶ್ರೀ ರಾಮಕೃಷ್ಣ ಹೆಗ್ಗಡೆ.—ಜನರು ಮುಂದೆ ಬರಲಿಲ್ಲ ; ಸ್ಥಾಪನೆ ಮಾಡಲಿಲ್ಲ ಅಷ್ಟೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಜನರು ಮುಂದೆ ಬರಲಿಲ್ಲ ಎಂದು ಹೇಳಿದಿರಿ. ಮುಂದೆ ಬಂದು ಸೊಸೈಟಿ ಸ್ಥಾಪನೆ ಮಾಡಬೇಕೆಂದವರಿಗೆ ಯಾವಯಾವ ಜಿಲ್ಲೆಯಲ್ಲಿ ಯಾರ್ಯಾರಿಗೆ ಎಷ್ಟೆಷ್ಟು ಹಣ ಕೊಟ್ಟಿದ್ದೀರಿ?

Mr. SPEAKER.—Has it been sought in the question? Otherwise it will be voluminous to reply.

Sri RAMAKRISHNA HEGDE.—It is not incended in the main question. If the hon. member wants, I am prepared to giveit later.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ದಕ್ಷಿಣ ಕನ್ನಡ ಜಿಲ್ಲೆಯವರು ಮುಂದೆ ಬರಲಿಲ್ಲ ಎಂದು ಹೇಳಿದರು. ಮುಂದೆ ಬಂದಿರತಕ್ಕ ಬಳ್ಳಾರಿ, ಚಿತ್ರದುರ್ಗ, ಮತ್ತು ತುಮಕೂರು ಜಿಲ್ಲೆಗಳವರಿಗೆ ಎಷ್ಟೆಷ್ಟು ಹಣ ಕೊಟ್ಟಿದ್ದೀರಿ?

Mr. SPEAKER.—It is a very good point for a new question. There are 19 districts and the details will be too many.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ಅನೇಕ ಜಿಲ್ಲೆಗಳಲ್ಲಿ ಈ ತರಹ ಸೊಸೈಟಿಗಳನ್ನು ಮಾಡಬೇಕೆಂದರೂ ಯಾವ ಸೌಲಭ್ಯವೂ ಸರ್ಕಾರ ಒದಗಿಸದೇ ಇದ್ದುದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೊಸೈಟಿ ಮಾಡುವುದಕ್ಕೆ ಜನ ಹಿಂಜರಿಯುತ್ತಾ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಗಮನಕ್ಕೆ ಬಂದಿಲ್ಲ. ಸೌತ್ ಕೆನರಾದಲ್ಲಿ ಬೇರೆ ಜಿಲ್ಲೆಯವರನ್ನು ನೋಡಿ ಸೊಸೈಟಿ ಮಾಡಲಿಕ್ಕೆ ಇನ್ನೊಬ್ಬರ ಕಬೂಲು ಏನೂ ಬೇಕಾಗಿಲ್ಲ; ಅವರನ್ನು ಒತ್ತಾಯ ಮಾಡುತ್ತೇವೆ.

ಶ್ರೀ ಎ. ಕೃಷ್ಣಶೆಟ್ಟಿ.—ಈ ಸಹಕಾರೀ ಸಂಘಗಳನ್ನು ಸ್ಥಾಪನೆ ಮಾಡಲು ದಕ್ಷಿಣ ಕನ್ನಡ ಜಿಲ್ಲೆಯ ಭಾಗದಲ್ಲಿ ಜನಗಳು ಮುಂದೆ ಬಾರದಿರಲು ಕಾರಣ ವೇನು?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ಸ್ಕೀಂ ಹೊಸದು. ಬೊಂಬಾಯ್ ಕರ್ನಾಟಕದಲ್ಲಿ Post-War Reconstruction Scheme ಎಂದು ಹರಿಜನರಿಗೆ ಮನೆ ಕಟ್ಟಲಿಕ್ಕೆ ಸೌಲಭ್ಯ ಕೊಡುತ್ತಾ ಇದ್ದರು. ಬಹಳ ವರ್ಷದಿಂದ ಅಲ್ಲಿ ಇದೆ. ಹಳೇ ಮೈಸೂರು ಮತ್ತು ಮದರಾಸ್ ಕರ್ನಾಟಕದಲ್ಲಿ ಈ ಸ್ಕೀಂ ಇರಲಿಲ್ಲ. ಕಳೆದ 1½-2 ವರ್ಷಗಳಿಂದ ಸೊಸೈಟಿಗಳ ಮೂಲಕ 3,000 ರೂಪಾಯಿಗಳವರೆಗೂ ಸಾಲಕೊಡಬೇಕೆಂದು ಸರ್ಕಾರದವರು ನಿರ್ಣಯ ಮಾಡಿದ್ದಾರೆ. ಇದು ಜನರಲ್ಲಿ ಹೆಚ್ಚು ಪ್ರಚಾರವಾಗಿಲ್ಲ. ಆದರಿಂದ ಇದರ ಸೌಲಭ್ಯ ತೆಗೆದುಕೊಂಡಿಲ್ಲ; ತೆಗೆದುಕೊಳ್ಳುವುದಕ್ಕೆ ಮುಂದೆ ಬಂದಿಲ್ಲ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಇದಕ್ಕೇ ಪ್ರತ್ಯೇಕ ಸೊಸೈಟಿ ರಿಜಿಸ್ಟರ್ ಮಾಡಿ ಮನೆ ಕಟ್ಟಲಿಕ್ಕೆ ಹಣ ಕೇಳುವ ವ್ಯಕ್ತಿಗಳಿಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಈಗಿರುವ ಸಹಕಾರಿ ಸಂಘಗಳಿಂದ ಹಣ ಪಡೆಯ ಎವ ಸೌಲಭ್ಯ ಒದಗಿಸಿದರೆ ಅನುಕೂಲವಾಗುವುದಿಲ್ಲವೇ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಮಾನ್ಯ ಸದಸ್ಯರ ಪ್ರಶ್ನೆ ಸಂಪೂರ್ಣವಾಗಿ ಅರ್ಥವಾಗಲಿಲ್ಲ. ಯಾವ ಯಾವ ಸಹಕಾರಿ ಸಂಘಗಳು ತಾಲ್ಲೂಕು ಮಟ್ಟದಲ್ಲಿ ವೆಯೋ ಆ ತಾಲ್ಲೂಕು ಮಟ್ಟದ ಸಂಘಗಳ ಮೂಲಕ ವಾಗಿ ಸಾಲ ಒದಗಿಸುತ್ತೇವೆ. ಯಾವ ಯಾವ ತಾಲ್ಲೂಕಿಕನಲ್ಲಿ ಸಹಕಾರಿ ಸಂಘ ಮಾಡಿಲ್ಲವೋ ಅಲ್ಲಿ ಹೊಸದಾಗಿ ಸಹಕಾರಿ ಸಂಘ ಸ್ಥಾಪನೆ ಮಾಡಬೇಕೆಂದು, 3 ತಿಂಗಳೊಳಗೆ ಅಂಕಿಅಂಶ ಸಂಗ್ರಹಿಸಬೇಕೆಂದೂ ಆದೇಶ ಈಗಾಗಲೇ ಕೊಟ್ಟಿದ್ದೇವೆ. ಇದೇ ನಂದರ್ಭದಲ್ಲಿ ಒಂದು ವಿಚಾರ ಹೇಳಬೇಕೆಂದಿದ್ದೇನೆ. ಒಂದು ತಾಲ್ಲೂಕಿನಲ್ಲಿ ಕನಿಷ್ಠ ಪಕ್ಷ 100 ಕುಟುಂಬಗಳಿಗೆ ಈ ಒಂದು ಸಹಾಯ, ಮನೆಕಟ್ಟತಕ್ಕ ಅವಕಾಶ, ಮಾಡ ಬೇಕೆಂದು ಎಲ್. ಐ. ಸಿ.ಯಿಂದ ಮೂರು ಕೋಟಿ ರೂಪಾಯಿ ಸಾಲ ತೆಗೆದುಕೊಳ್ಳಬೇಕೆಂದು ಸರ್ಕಾರ ದವರು ಈಗಾಗಲೇ ಒಂದು ನಿರ್ಣಯ ತೆಗೆದುಕೊಂಡಿ ದ್ದಾರೆ.

ಶ್ರೀಮತಿ ಚಂಪಾಬಾಯಿ ಭೋಗಲೆ.—ಬೆಳಗಾಂ ಜಿಲ್ಲೆಯಲ್ಲಿ 14 ಸಂಘಗಳು ಇವೆ. ಆ ಸಂಘಗಳ ಹೆಸರು ಏನು?

ಶ್ರೀ ರಾಮಕೃಷ್ಣ ಹೆಗ್ಗಡೆ.—ಇಷ್ಟು ಮಾತ್ರ ಹೇಳ ಬಲ್ಲೆ ಶ್ರೀಮತಿ ಚಂಪಾಬಾಯಿ ಅವರು ಸ್ಥಾಪನೆ ಮಾಡಿದ್ದೂ ಒಂದು ಇದೆ.

ಶ್ರೀಮತಿ ಚಂಪಾಬಾಯಿ ಭೋಗಲೆ.—ಅದಕ್ಕೆ ಹಣ ಮಂಜೂರಾಗಿದೆಯೇ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಹಣ ಮಂಜೂರಾ ಗುವಂಥ ಸ್ಥಿತಿಯಲ್ಲಲ್ಲ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಇದಕ್ಕೆ ಪ್ರತ್ಯೇಕವಾಗಿ ಹರಿಜನರೇ ಒಂದು ಸಂಘವನ್ನು ಸ್ಥಾಪನೆಮಾಡಿ ಮನೆಕಟ್ಟಲು ಹಣ ಕೇಳಬೇಕೆಂದರೆ ಕಷ್ಟವಾಗುತ್ತದೆ. ಆದ್ದರಿಂದ ಈಗಾಗಲೇ ರಿಜಿಸ್ಟರ್ ಆಗಿರುವಂಥ, ತಾಲ್ಲೂಕು ಮಟ್ಟದ ಬಲ್ಡಿಂಗ್ ಸೊಸೈಟಿ ಅಥವಾ ಜನರಲ್ ಸೊಸೈಟಿ ಏನಿದೆ ಅದರ ಮೂಲಕ ಹಣ ಕೊಡಲು ಅನುಕೂಲ ಮಾಡಲಿಕ್ಕೆ ಆಗುವುದಿಲ್ಲವೇ?

Mr. SPEAKER.—Do the Rules of the society permit it? Has the hon. member verified it?

ಶ್ರೀ ಕುಂದೂರು ರುದ್ರಪ್ಪ.—ಹೊಸ ಕಾನೂನು ಪ್ರಕಾರ ಸಂಘಗಳ ಮೂಲಕ ಸಾಲ ಕೊಡುತ್ತೇವೆ ಎನ್ನುವುದು ಹೆಚ್ಚಿನ ಮಾತೇ ಆದರೂ ಹಿಂದೆ ಅರ್ಧಮರ್ಧ ಮಾಡಿ 200 ರೂಪಾಯಿ ಕೊಡುವವರಿಗೆ 100 ರೂಪಾಯಿ ಕೊಟ್ಟಿದ್ದೀರಿ, ಇನ್ನೂ ಪೂರ್ತಿ ಹಣ ಕೊಟ್ಟಿಲ್ಲ. ಅಂತಹವರಿಗೆ ಪೂರಾ ಹಣ ಕೊಡಲು ಏರ್ಪಾಡು ಮಾಡುತ್ತೀರಾ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಯಾವ ಯಾವ ಭಾಗ ದಲ್ಲಿ ಹರಿಜನರು ಅರ್ಧಮರ್ಧ ಮನೆ ಸರ್ಕಾರದ ಸಹಾಯ ಪಡೆದು ಕಟ್ಟಿದ್ದಾರೋ ಅವನ್ನು ಪೂರ್ತಿ ಗೊಳಿಸುವುದು ಸರ್ಕಾರದ ಕರ್ತವ್ಯ. ಅವನ್ನು ಪೂರ್ತಿ ಗೊಳಿಸುತ್ತೇವೆ. ಹೊಸದಾಗಿ ಮನೆ ಕಟ್ಟಬೇಕಾದರೆ ಮಾತ್ರ ಸೊಸೈಟಿಯ ಮುಖಾಂತರ ಕಟ್ಟಬೇಕೆಂದು ಸರ್ಕಾರದ ಉದ್ದೇಶ. ಮತ್ತು ಅದರಿಂದ ವಿಶೇಷ ಮನೆಗಳು ಆಗಬಹುದು ಎಂದು ಭಾವಿಸಲಾಗಿದೆ.

ಶ್ರೀಮತಿ ಚಂಪಾಬಾಯಿ ಭೋಗಲೆ.—ಈಗ ಬೆಳಗಾಂ ಜಿಲ್ಲೆಯಲ್ಲಿ ಹರಿಜನರ ಹೌಸಿಂಗ್ ಸೊಸೈಟಿಗಳೆಷ್ಟಿವೆ? ಯಾವ ಯಾವುದಕ್ಕೆ ಎಷ್ಟೆಷ್ಟು ಹಣ ಕೊಟ್ಟಿದೆ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಆ ವಿಚಾರದಲ್ಲಿ ಆಗಲೆ ಜವಾಬು ಹೇಳಿದೆ. ಪ್ರತಿಯೊಂದು ಸೊಸೈಟಿ ವಿಷಯದಲ್ಲಿ ನಾಕಷ್ಟು ಮಾಹಿತಿಯಲ್ಲ. ಇಂಥ ಸೊಸೈಟಿಗೆ ಸಂಬಂಧಪಟ್ಟ ವಿಷಯ ಬೇಕೆಂದು ಹೇಳಿದರೆ ತರಿಸಿಕೊಡುತ್ತೇನೆ.

Mr. SPEAKER.—The Hon'ble Minister will please supply information to the hon. member in respect of 14 societies in Belgaum.

Sri S. RAJAGOPAL.—In Kolar it is mentioned that two societies are there. May I know which are they ?

Sri RAMAKRISHNA HEGDE.—I have got only figures. So I cannot give names.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—1961-62ರಲ್ಲಿ 19 ಸಂಘಗಳು ರಿಜಿಸ್ಟರ್ ಮಾಡಲ್ಪಟ್ಟಿವೆ, 1961-62ಕ್ಕೆ ಮುಂಚೆ 85 ಸಂಘಗಳಿದ್ದುವು. ಒಟ್ಟು ಈ 104 ಸೊಸೈಟಿಗಳಿಂದ 1961-62ರಲ್ಲಿ ಹರಿಜನರಿಗೆ ಮನೆ ಕಟ್ಟಿಕೊಳ್ಳಲು ಕೊಟ್ಟ ಹಣವೆಷ್ಟು ?

Mr. SPEAKER.—The question does not relate to funds. The hon. minister may kindly furnish that information to the hon. member.

ಶ್ರೀ ಬಿ. ಭಾಸ್ಕರ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಆದಿಮ ಜಾತಿಗಳವರಿಗೆ ಗೃಹವಸತಿ ಸೌಕರ್ಯ ಒದಗಿಸಲು ಬೇರೆ ಯಾವ ರೀತಿ ಸರ್ಕಾರ ಸಹಾಯ ಮಾಡುತ್ತದೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಯಾವ ರೀತಿಯಿಂದ ಸಾಧ್ಯವೋ ಆ ರೀತಿ ಮಾಡುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಸಹಕಾರ ಸಂಘಗಳನ್ನು ಸಂಘಟಿಸತಕ್ಕವರು ಯಾರು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಈಗ ಹೊಸದಾಗಿ ಸರ್ಕಾರದವರು ತೀರ್ಮಾನ ಮಾಡಿದ ವಿಚಾರವಾಗಿ ಎರಡು ಮಾತುಗಳನ್ನು ಹೇಳಿದರೆ ಮಾನ್ಯ ಸದಸ್ಯರಿಗೆ ವಿಷಯ ಚೆನ್ನಾಗಿ ಗೊತ್ತಾಗಬಹುದು. ಅಸಿಸ್ಟೆಂಟ್ ರಿಜಿಸ್ಟ್ರಾರರು, ಪ್ರತಿ ತಾಲ್ಲೂಕಿನಲ್ಲೂ ಇರುವ ಕೋ-ಆಪರೇಟಿವ್ ಎಕ್ಸ್‌ಟೆಷ್ಷನ್ ಆಫೀಸರು, B.D.O. ಮತ್ತು ಸ್ಪೆಷಲ್ ರೆವೆನ್ಯೂ ಇನ್‌ಸ್ಪೆಕ್ಟರು ಈ ಮೂರು ಜನರೂ ಪ್ರತಿ ತಾಲ್ಲೂಕಿನ ಎಲ್ಲಾ ಹಳ್ಳಿಗಳಿಗೂ ಹೋಗಿ ನೋಡಿ, ಎಲ್ಲಿ ಎಷ್ಟು ಮನೆಗಳನ್ನು ಕಟ್ಟಬೇಕೆಂಬುದನ್ನು ವಿಚಾರ ಮಾಡಬೇಕು ಮತ್ತು ಹೊಸದಾಗಿ ತಾಲ್ಲೂಕು ಮಟ್ಟದಲ್ಲಿ ಒಂದು ಸೊಸೈಟಿ ಸ್ಥಾಪಿಸಲು ಸಾಧ್ಯವಿದೆಯೆ ಎಂಬ ಬಗ್ಗೆ ಮಾಹಿತಿ ತರಿಸಿಕೊಳ್ಳಬೇಕು. ಮತ್ತು ಈ ಸೊಸೈಟಿಗಳಿಗೆ ತಾತ್ಕಾಲಿಕವಾಗಿ ತಾಲ್ಲೂಕ್ ಬೋರ್ಡ್ ಅಧ್ಯಕ್ಷರೇ ಅಧ್ಯಕ್ಷರಾಗಿರಬೇಕು ಮತ್ತು ತಾಲ್ಲೂಕ್ ಬೋರ್ಡಿನ ಹರಿಜನ ಸದಸ್ಯರೊಬ್ಬರು ಉಪಾಧ್ಯಕ್ಷರಾಗಿರಬೇಕು ಮತ್ತು ಕೋ-ಆಪರೇಟಿವ್ ಎಕ್ಸ್‌ಟೆಷ್ಷನ್ ಆಫೀಸರು ಸೆಕ್ರೆಟರಿಯಾಗಿಯೂ, ಸ್ಪೆಷಲ್ ರೆವೆನ್ಯೂ ಆಫೀಸರು ಜಾಯಿಂಟ್ ಸೆಕ್ರೆಟರಿಯಾಗಿಯೂ ಇರಬೇಕು ಎಂದು ತೀರ್ಮಾನಿಸಲಾಗಿದೆ.

ಶ್ರೀ ಕೆ. ಲಕ್ಕಪ್ಪ.—ತುಮಕೂರು ಡಿಸ್ಟ್ರಿಕ್ಟಿನಲ್ಲಿ ಮೂರು ಸೊಸೈಟಿಗಳನ್ನು ಯಾವ ಯಾವ ತಾಲ್ಲೂಕಿನಲ್ಲಿ ರಿಜಿಸ್ಟರು ಮಾಡಲಾಗಿದೆ ? ಅವುಗಳಿಗೆ ಹಣ ಕೊಟ್ಟಿರುವುದೆಷ್ಟು ?

Sri RAMAKRISHNA HEGDE.—Is that supplementary allowed, Sir ?

Mr. SPEAKER.—If the information is available, it can be given.

Sri RAMAKRISHNA HEGDE.—At present I do not have information regarding the distribution of funds.

ಶ್ರೀ ಕೆ. ಲಕ್ಕಪ್ಪ.—ನನಗೆ ಗೊತ್ತಿರುವ ಹಾಗೆ ತುಮಕೂರು ಡಿಸ್ಟ್ರಿಕ್ಟಿನಲ್ಲಿ ಯಾವ ಸೊಸೈಟಿಯೂ ಸಹ ಫಾರಂ ಆಗಿಲ್ಲ.

Mr. SPEAKER.—Before the hon. member contradicts an answer, which has been given, he must be sure about it. I am going to ask for a list tomorrow and if I find that what he says is not correct....

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆ ಶಾಖೆಯ ಮಂತ್ರಿಗಳು).—ಅಮೃತೂರಿನಲ್ಲಿ ಒಂದು ಮತ್ತು ತಿಪಟೂರಿನಲ್ಲಿ ಒಂದು ಹೀಗೆ ಎರಡು ಸೊಸೈಟಿಗಳು ಸ್ಥಾಪಿಸಲ್ಪಟ್ಟಿವೆ ಎಂದು ತಿಳಿದು ಬಂದಿದೆ.

ಶ್ರೀ ಕೆ. ಲಕ್ಕಪ್ಪ.—ಬೇರೆ ಮಂತ್ರಿಗಳು ಹೇಳುತ್ತಿದ್ದಾರೆ. ಈ ವಿಚಾರ ಸಹಕಾರ ಶಾಖಾ ಮಂತ್ರಿಗಳಿಗೇ ಗೊತ್ತಿಲ್ಲ.

Mr. SPEAKER.—Any Minister is entitled to give a reply but no member is entitled to make a wrong statement.

Tenders for works in Sharavathi Valley Project.

*Q.—528. **Sri V. S. LAKSHMIKANTHAPPA** (Sagar).—

Will the Government be pleased to state :—

(*a*) whether any tenders were called for, for works in Sharavathi Valley Project during 1961-62 and 1962-63 ;

(*b*) if so, the items in respect of which such re-tenders were called for and the reasons for the same ?

A.—**Sri B. D. JATTI** (Minister for Finance). [On behalf of SRI S. NIJALINGAPPA (Chief Minister).—

(*a*) Yes.

(*b*) *Vide* statements placed on the Table of the House. [Copy placed in the Mysore Legislature Library *vide* No. 6/L.A./September 1962.]

Sri V. S. LAKSHMIKANTHAPPA.—What is the schedule of rate for the collection of sand and roubles ?

Sri B. D. JATTI.—I have no information regarding that.

Sri K. S. SURYANARAYANA RAO.—In 1962-63 tenders were called but no tender was accepted. It was negotiated and settled. May I know the rates quoted by the lowest tenderer and why tenders were not accepted but negotiated ?